ಅನಿವಾರ್ಯತೆ.

ಒಮ್ಮೆ ಮಕ್ಕಳ ಒತ್ತಾಯಕ್ಕೆಂದು ಮೈಸೂರಿಗೆ ಬಸ್ಸು ಏರಿದ್ದೆ. ಈಗಲೇ ಟಿಕೇಟು ರಿಸರ್ವ್ ಮಾಡುವ ಅಂತಂದ ಮಗನ ಮಾತಿಗೆ ಸೊಪ್ಪು ಹಾಕದೆ, ಫ್ರೀ ಸೌಲಭ್ಯ ಸದುಪಯೋಗ ಪಡಿಸಿಕೊಳ್ಳಬೇಕು ಅಂತ ಇಷ್ಟುದ್ದ ಪಾಠ ಮಾಡಿದ್ದೆ. ಹೋಗುವಾಗ ಒಂದಷ್ಟು ಹೊತ್ತು ನಿಂತಿದ್ದು ಮತ್ತೆ ಹೇಗೋ ಸೀಟು ಸಿಕ್ಕಿತ್ತು. ಅದಾಗಲೇ ಅವನು ಪಿರಿಪಿರಿ ರಾಗ ಎಳಿಲಿಕ್ಕೆ ಶುರು ಮಾಡಿದ್ದ. ಬರುವಾಗ ಖಂಡಿತಾ ಸೀಟು ಇರಲ್ಲ, ಈಗಲೇ ಟಿಕೇಟು ರಿಸರ್ವ್ ಮಾಡಿಕೋ. ಮೂರು ನಾಕು ಗಂಟೆ ನಂಗಂತು ನಿಲ್ಲೋಕೆ ಸಾಧ್ಯವೇ ಇಲ್ಲ ಅಂತಂದ. ನಾನೋ ಏನು ಆಗಲ್ಲ ಸೀಟು ಸಿಕ್ಕೇ ಸಿಗುತ್ತದೆ ಅಂದೆ. ಇಷ್ಟೊಂದು ಪಿಟ್ಟಾಸಿ ಆಗಬಾರದು, ನಾನು ಟಿಕೇಟು ಕೊಡಲೇ ಬೇಕಲ್ಲ, ನಂಗಾದರೂ ಮಾಡಿಸು ಆರಾಮದಲ್ಲಿ ಕೂತುಕೊಂಡು ಬರಬಹುದು ಅಂದರೂ ನಾ ಕೇಳಲಿಲ್ಲ.

ಅಮಾವಾಸ್ಯೆಗೊಮ್ಮೆ, ಹುಣ್ಣಿಮೆಗೊಮ್ಮೆ ಮನೆಯಿಂದ ಹೊರಗೆ ಹೋಗುವ ನನಗೆ ಹೊರಗಿನ ವಸ್ತುಸ್ಥಿತಿಯ ಅರಿವಿರಲಿಲ್ಲ. ಶಾಪಿಂಗ್ ಮಾಡಿದೆವು, ಒಳ್ಳೆಯ ಹೊಟೇಲ್‌ನಲ್ಲಿ ಊಟವೂ ಮಾಡಿದೆವು. ಬಸ್‌ಸ್ಟ್ಯಾಂಡಿಗೆ ಬಂದಾಗ ಊರಿನ ಕಡೆಗೆ ಹೋಗುವ ಬಸ್ಸೊಂದು ಬಂದು ನಿಂತಿತು. ಈ ಬಸ್‌ಸ್ಟ್ಯಾಂಡಿನ ಎಲ್ಲಾ ಜನರು ಇದೇ ಬಸ್ಸಿಗೆ ಹತ್ತುತ್ತಿರುವರೇನೋ ಅನ್ನಿಸಿತು. ಕೈಯಲ್ಲಿ ಲಗೇಜು ಬೇರೆ, ಬಸ್ಸಿನ ಮೆಟ್ಟಿಲು ಹತ್ತಲಿಕ್ಕೂ ಪುರುಸೊತ್ತು ಕೊಡುವುದಕ್ಕೆ ಮುಂಚೆ ಬಸ್ಸು ತುಂಬಿಕೊಂಡಿತು. ಇರಲಿ, ಇನ್ನರ್ಧ ಗಂಟೆ ಬಿಟ್ಟು ಒಂದು ಬಸ್ಸು ಇದೆಯಲ್ಲ, ಅದು ಹತ್ತುವ ಅಂತ ಅಲ್ಲೇ ಕಾದೆವು. ಅರ್ಧಗಂಟೆ ಬಿಟ್ಟು ಸರಿಯಾದ ಸಮಯಕ್ಕೆ ಬಸ್ಸೇನೋ ಬಂತು. ಈಗಲೂ ಸಂತೆ ಜನ. ಜಗತ್ತಿನ ಜನರೆಲ್ಲಾ ಬಸ್ಸೊಳಗೇ ಕಾಲ ಕಳೆಯುತ್ತಿರುವಂತೆ ತೋರಿತು. ಇನ್ನು ಈ ಬಸ್ಸು ಬಿಟ್ಟರೆ ಮನೆ ತಲುಪುವಾಗ ಮಧ್ಯರಾತ್ರಿ ಖಚಿತ ಅನ್ನಿಸಿ ಬಸ್ಸು ಹತ್ತಲು ತಯಾರಾದೆವು. ನನ್ನ ಮಗನೋ ಹೇಗೋ ಕಿಟಕಿ ಮೂಲಕ ಕರ್ಚೀಫು ಇಳಿಸಿ, ಕಷ್ಟಪಟ್ಟು ನುಗ್ಗಿ ಮೂರು ಸೀಟು ಹಿಡಿದು ರಾಜ್ಯವನ್ನೇ ಗೆದ್ದಷ್ಟು ಖುಷಿಯಲ್ಲಿ ಬೀಗಿದ. ಮತ್ತೂ ಒಂದು ಸೀಟು ಹೆಚ್ಚಿಗೆ ಇಟ್ಟು, ನಮ್ಮ ಜೊತೆಗೆ ಇದ್ದ ಪರಿಚಿತರಿಗೆ ಕೂರಲು ಹೇಳಿದ. ಅಬ್ಬಾ! ಸದ್ಯ ಸಿಕ್ಕಿತಲ್ಲ ಅಂತ ನಿರಾಳವಾಗಿ ಉಸಿರಾಡುವ ಹೊತ್ತಿಗೆ, ನೋಡಿ ನೋಡಿ ಟಿಕೇಟ್ ರಿಸರ್ವ್ ಆಗಿದೆ ಕೂತವರು ಎದ್ದೇಳಬೇಕು ಅಂತ ಕಂಡಕ್ಟರ್ ಬೊಬ್ಬೆಗೆ ಎದೆ ಧಸಕ್ ಅಂದರೂ ನಮ್ಮದಾಗಿರಲಾರದು ಅಂತ ಗಟ್ಟಿ ಕೂತುಕೊಂಡಿರುವಾಗ 25, 26, 27 ಯಾರಲ್ಲಿ ಏಳಿ ಏಳಿ ಅಂದಾಗ ನಾವು ಕುಳಿತ ಸೀಟು ರಿಸರ್ವ್ ಆಗಿತ್ತು. ಆ ದಿವಸ ಎಷ್ಟು ಕಷ್ಟ ಆಯಿತೆಂದರೆ ಬರೋಬ್ಬರಿ ನಾಕು ಗಂಟೆ ನಿಂತು, ಸೀಟಿಗೊರಗಿ, ಆಚೆ ಈಚೆ ಕಾಲು ಬದಲಿಸಿ ಹೇಗೋ ಬಂದು ತಲುಪಿದೆವು. ನಾವು ಉದಾರವಾಗಿ ಸೀಟಿಟ್ಟು ಕೊಟ್ಟವರು ತಿರುಗದೆ ಗಟ್ಟಿಯಾಗಿ ಕುಳಿತುಕೊಂಡರು. ಅಕ್ಕಪಕ್ಕದವರು ಒಂದಷ್ಟು ಜರುಗದೆ ನಮಗೂ ನಿಮಗೂ ಯಾವುದೇ ಸಂಬಂಧ ಇಲ್ಲದಂತೆ ಕುಳಿತುಕೊಂಡಿದ್ದರು. ನಮ್ಮ ಜನರಲ್ಲಿ ಅಷ್ಟೂ ಕರುಣೆ ಸತ್ತಿದೆಯಾ ಅನ್ನಿಸಿತು. ಯಾವುದೇ ಆಗಲಿ ನಮ್ಮ ಬುಡಕ್ಕೆ ಬಂದಾಗಲೇ ಜನರನ್ನ ಮತ್ತು ಬದುಕನ್ನ ಹೆಚ್ಚು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವುದು. ಅದರ ನಂತರ ಎಲ್ಲಿಯಾದರೂ ಹೋಗಬೇಕೆಂದರೆ ರಿಸರ್ವ್ ಮಾಡಿಯೇ ಹೋಗಲು ಶುರು ಮಾಡಿದೆ.

ಮೊನ್ನೆಯೂ ಹಾಗೆಯೇ ಆಯಿತು. ಸಾಹಿತ್ಯ ಕಾರ್ಯಕ್ರಮಕ್ಕೊಂದು ಹೋಗಲಿತ್ತು. ಅದೂ ಮೂರು ಗಂಟೆ ಪ್ರಯಾಣ. ಬೆಳ್‌ಬೆಳಗ್ಗೆ ರಶ್ ಇರಲಾರದು, ಬರುವಾಗ ಸಂಜೆಗೆ ಮಾತ್ರ ರಿಸರ್ವ್ ಮಾಡಿದರಾಯ್ತು ಅಂತ ಅಂದುಕೊಂಡರೆ, ಬೆಳಗ್ಗೆ ಆರು ಗಂಟೆಯ ಬಸ್ಸಿನಲ್ಲಿ ಕೂಡ ಸ್ಟ್ಯಾಂಡಿಂಗ್. ಮತ್ತೊಂದು ಅರ್ಧಗಂಟೆ ಬಿಟ್ಟು ಮತ್ತೊಂದು ನಿಲ್ದಾಣದಲ್ಲಿ ಸೀಟು ಸಿಕ್ಕಿತ್ತೆನ್ನಿ. ಇನ್ನು ಬರುವಾಗ ಈ ಪಡಿಪಾಟಲು ಬೇಡವೆಂದು ಸೀಟು ಬುಕ್ಕು ಮಾಡಲು ಹೊರಟರೆ ಬಸ್ಸು ಅದಾಗಲೇ ಫುಲ್ ತೋರಿಸುತ್ತಿತ್ತು. ಮತ್ತೊಂದು ಬಸ್ಸು ತೋರಿಸುತ್ತಲೇ ಇರಲಿಲ್ಲ. ಮತ್ತೆ ಏಳೂವರೆ ಗಂಟೆಗೆ. ಅದೂ ಫುಲ್ ಆಗಿತ್ತು. ಇನ್ನು ಕಾದರೆ ಆಗಲಾರದು, ಪೇಪರ್ ಹಾಸಿಯಾದರೂ ಕೂತುಕೊಂಡು ಬರುವುದೇ ಅಂತ ತೀರ್ಮಾನಿಸಿದೆ. ಗೆಳತಿಯೂ ಜತೆಗಿದ್ದಳು. ನನ್ನ ಕಾರ್ಯಕ್ರಮ ಮುಗಿದ ತಕ್ಷಣ, ಕಾಲು ನಡಿಗೆಯಾದರೂ ರಿಕ್ಷಾ ಮಾಡಿಕೊಂಡು ಬಂದೆವು. ನಾವು ಇಳಿಯುವುದು